ಅಸಲು ದಾವಾ ಸಂ. 95 ಃ 2010

ಪಿ.ಡಬ್ಲ್ಯೂ. 1

ಪ್ರಃಮಾಃದಿಃ 15-06-2016.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಕೆ ಜಿ ಎಂ ವಕೀಲರು ವಾದಿ ಪರವಾಗಿಃ-

ಮತದಾರರ ಪಟ್ಟಿಯಗೋಸ್ಕರ ಗ್ರಾಮ ಪಂಚಾಯಿತಿ, ಕಮ್ಮಾರಗಟ್ಟೆಯವರಿಗೆ ಕೊಟ್ಟಂತಹ ಅರ್ಜಿಯ ನಕಲು ನಿಪಿ-21, 2013ನೇ ಸಾಲಿನ ವಾದಿಗಳ ಮತ್ತು ಪ್ರತಿವಾದಿಗಳ ಭಾವಚಿತ್ರ ಸಹಿತ ಇರುವ ಮತದಾರರ ಪಟ್ಟಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ-22, ಸದರಿ ನಿಪಿ-22 ರಲ್ಲಿ ವಾದಿ ನಂ.1 ಇವರ ಭಾವ ಚಿತ್ರ ಕ್ರಮ ಸಂಖ್ಯೆ 484, ವಾದಿ ನಂ.2 ಇವರ ಭಾವ ಚಿತ್ರ ಕ್ರಮ ಸಂಖ್ಯೆ 674, ವಾದಿ ನಂ.4 ಇವರ ಭಾವ ಚಿತ್ರ ಕ್ರಮ ಸಂಖ್ಯೆ 803, ವಾದಿ ನಂ.5 ಇವರ ಭಾವ ಚಿತ್ರ ಕ್ರಮ ಸಂಖ್ಯೆ 501, ವಾದಿ ನಂ.6 ಇವರ ಭಾವ ಚಿತ್ರ ಕ್ರಮ ಸಂಖ್ಯೆ 245, ವಾದಿ ನಂ.7 ಇವರ ಭಾವ ಚಿತ್ರ ಕ್ರಮ ಸಂಖ್ಯೆ 582, ವಾದಿ ನಂ.8 ಇವರ ಭಾವ ಚಿತ್ರ ಕ್ರಮ ಸಂಖ್ಯೆ 350, ವಾದಿ ನಂ.9 ಇವರ ಭಾವ ಚಿತ್ರ ಕ್ರಮ ಸಂಖ್ಯೆ 377, ಪ್ರತಿವಾದಿ ನಂ.1 ರಿಂದ 8 ಇವರ ಭಾವ ಚಿತ್ರ ಕ್ರಮ ಸಂಖ್ಯೆ 697, 703, 706, 705, 714, 718, 722, 193, ಪ್ರತಿವಾದಿ ನಂ.8 ರವರ ವಾರಸುದಾರರ ಭಾವ ಚಿತ್ರದ ಕ್ರಮ ಸಂ. 196, 199, 723, ಪ್ರತಿವಾದಿ 9 ರಿಂದ 12 ರವರ ಭಾವ ಚಿತ್ರದ ಕ್ರಮ ಸಂಖ್ಯೆ 727, 734, 739. ಪ್ರತಿವಾದಿ ವೆಂಕಟೇಶ್‌ಶೆಟ್ಟಿ ಇವರು ಆರ್ ಟಿ ಐನಲ್ಲಿ ಕೊಟ್ಟ ಅರ್ಜಿಯ ನಕಲು ನಿಪಿ-23, ವೆಂಕಟೇಶ್‌ಶೆಟ್ಟಿರವರು ಗ್ರಾಮ ಪಂಚಾಯಿತಿ ಕಮ್ಮಾರಗಟ್ಟೆ ಇವರಿಗೆ ಕೊಟ್ಟಂತಹ ಅರ್ಜಿಯ ದೃಡೀಕೃತ ನಕಲು ನಿಪಿ-24, ಅಸಲು ದಾವಾ ಸಂ. 147/1972 ಶಿಖಾರಿಪುರ ನ್ಯಾಯಾಲಯದಲ್ಲಿ ಆದಂತಹ ತೀರ್ಪು ಹಾಗೂ ಡಿಕ್ರಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-25 ಮತ್ತು 26, ಖಾತಾ ಸಂ. 58, 59, 61, 73, 74, 141 ನೇದ್ದರ ಖಾತಾ ದಾಖಲೆಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-27, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಹೊನ್ನಾಳಿ ನನಗೆ ಕೊಟ್ಟಂತಹ ಅರ್ಜಿಯನ್ನು ಹಾಜರುಪಡಿಸಿದ್ದು ನಿಪಿ-28, ಗ್ರಾಮ ಪಂಚಾಯಿತಿ ಕಮ್ಮಾರಗಟ್ಟೆ ಇವರು ಕೊಟ್ಟಂತಹ ದೇವಸ್ಥಾನಗಳು ಪ್ರಾಚೀನ ಸ್ಮಾರಕಗಳ ವಿಸ್ತೀರ್ಣ ಖಾತಾ ನಕಲು ಮತ್ತು ಚೆಕ್ಕುಬಂದಿ ಹಾಜರುಪಡಿಸಿದ್ದು ನಿಪಿ-29, ಕಾರ್ಯದರ್ಶಿ ಗ್ರಾಮ ಪಂಚಾಯಿತಿ ಕಮ್ಮಾರಗಟ್ಟೆ ಇವರು 2008-09, 2009-10ನೇ ಸಾಲಿನಲ್ಲಿ ಪರವಾನಗಿ ಪಡೆಯದೇ ಅಕ್ರಮವಾಗಿ ನಿರ್ಮಾಣವಾದ ಮನೆಗಳ ವಿವರ ಪಟ್ಟಿಯನ್ನು ಹಾಜರುಪಡಿಸಿದ್ದು ನಿಪಿ-30, ಪ್ರಜಾವಾಣಿ ಪತ್ರಿಕೆಯ ಜಾಹಿರಾತುಗಳನ್ನು ಹಾಜರುಪಡಿಸಿದ್ದು ಅದನ್ನು ಗುರ್ತಿಸಲು ಪ್ರತಿವಾದಿಯರ ಪರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದು ಆಕ್ಷೇಪಣೆಗೆ ಒಳಪಟ್ಟು ನಿಪಿ-31 ಮತ್ತು 32 ಎಂದು ಗುರುತಿಸಲಾಯಿತು.

ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಿದೆ

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾಳಿ